# ಜಾರ್ಜ್ ಎಂಬ ನಾಯಿ!

ಜಾರ್ಜ್ ಎಂಬ ಹೆಸರಿನ ಗ್ರೇಟ್ ಡೇನ್ ಜಾತಿಯ ಈ ನಾಯಿ ವಿಶ್ವದಲ್ಲೇ ಅತ್ಯಂತ ಎತ್ತರದ ನಾಯಿ. ಇದರ ಉದ್ದ ಮೂಗಿನಿಂದ ಬಾಲದವರೆಗೆ 7 ಅಡಿ. ಎದ್ದು ನಿಂತಾಗ ಭುಜದವರೆಗಿನ ಎತ್ತರ 4 ಅಡಿ. ಇದರ ತೂಕ 114.3 ಕಿಲೋ. ಇದು ಅತ್ಯಂತ ಉದ್ದವಾದ ನಾಯಿ ಮಾತ್ರವಲ್ಲ; ಹಿಂದೆಂದೂ ಇಷ್ಟು ದೊಡ್ಡ ಗಾತ್ರದ ನಾಯಿ ಇರಲಿಲ್ಲ ಎನ್ನುತ್ತದೆ ಗಿನ್ನೆಸ್ ರೆಕಾರ್ಡ್ ಬುಕ್.

‘ಜಾರ್ಜ್ ಗಾತ್ರದಲ್ಲಿ ಮಾತ್ರವಲ್ಲ, ನಂಬುಗೆ-ವಿಶ್ವಾಸದಲ್ಲೂ ದೊಡ್ಡದೇ’ ಎನ್ನುತ್ತಾರೆ ಅದರ ಒಡೆಯ ಡೇವ್ ನಾಸೆರ್. 2006ರ ಜನವರಿಯಿಂದ ನಾಸೆರ್ ಹಾಗು ಕ್ರಿಸ್ಟಿ ದಂಪತಿಗಳ ಪ್ರೀತಿಯ ಆರೈಕೆಯಲ್ಲಿ ಜಾರ್ಜ್ ಮೈದುಂಬಿ ಬೆಳೆದಿದೆ. ಇವರ ಮನೆ ಪ್ರವೇಶಿಸಿದಾಗ, ಅದು ಒಂದೂವರೆ ತಿಂಗಳ ಅತಿ ಸಣ್ಣ ಮರಿ. ತಾಯಿ ಹೆತ್ತ 13 ಮರಿಗಳಲ್ಲಿ ಇದೂ ಒಂದು. ಎಲ್ಲ ಮರಿಗಳೂ ಸುಂದರವಾಗಿಯೇ ಇದ್ದವು. ಕ್ರಿಸ್ಟಿಗೆ ಈ ಮರಿ ಹಿಡಿಸಿ ದತ್ತು ತೆಗೆದುಕೊಂಡಳು.

ಅಮೆರಿಕಾದ ಒರೆಗಾನ್ ಪ್ರಾಂತ್ಯದಿಂದ ಅರಿಜೋನಾದವರೆಗೆ, ಸಾವಿರ ಮೈಲು ವಿಮಾನದಲ್ಲಿ ಪ್ರಯಾಣಿಸಿ ಈ ನಾಯಿಮರಿ ಡೇವ್ ಕುಟುಂಬದ ಜತೆ ಸೇರಿಕೊಂಡಿತು. ಆಗ ಅದು ‘ವಿಶ್ವದ ಅತಿ ದೊಡ್ಡ ಗಾತ್ರದ ನಾಯಿ’ಯ ಪಟ್ಟಕ್ಕೆ ಏರುತ್ತದೆಂದು ಯಾರೂ ಊಹಿಸಿರಲಿಲ್ಲ.

ಗ್ರೇಟ್ ಡೇನ್ ನಾಯಿಗಳು ಮನುಷ್ಯರಿಗೆ ಬೇಗನೆ ಹೊಂದಿಕೊಳ್ಳುತ್ತವೆ. ಜಾರ್ಜ್‌ಗೆ ತಾಯಿಯ ಅಗಲಿಕೆಯಿಂದಾದ ನೋವು ಬಾಧಿಸದಂತೆ, ಡೇವ್ ದಂಪತಿಗಳು ಅದನ್ನು ತುಂಬ ಎಚ್ಚರಿಕೆಯಿಂದ ನೋಡಿಕೊಂಡರು. ತಮ್ಮ ಬೆಡ್‌ರೂಂನಲ್ಲೇ ಅದಕ್ಕೊಂದು ಬೆಚ್ಚನೆಯ ಹಾಸಿಗೆ- ಹೊದಿಕೆಯ ವ್ಯವಸ್ಥೆ ಮಾಡಿದರು. ಕ್ರಿಸ್ಟಿಯೇ ಅದರ ತಾಯಿಯಾಗಿ ಬೆಳೆಸಿದಳು. ಅದರ ಬೆಳವಣಿಗೆಯನ್ನು ಆಕೆ ಚಾರ್ಟ್ ಹಾಗೂ ಫೋಟೋಗಳಲ್ಲಿ ದಾಖಲಿಸಿದಳು.

ಕ್ರಿಸ್ಟಿ ಮೊದಲ ಬಾರಿಗೆ ಗರ್ಭಿಣಿಯಾಗಿದ್ದಾಗ, ಹೆರಿಗೆಯಲ್ಲೇ ಮಗು ತೀರಿಕೊಂಡಿತು. ಆ ದುಃಖದ ಸಮಯದಲ್ಲಿ ಜಾರ್ಜ್ ನಿರಂತರವಾಗಿ ಅವಳ ಪಕ್ಕದಲ್ಲೇ ಇದ್ದು, ಅವಳ ದುಃಖವನ್ನು ತಾನೂ ಹಂಚಿಕೊಂಡಿದೆ. ಅವಳು ಎರಡನೆಯ ಬಾರಿ ಗರ್ಭ ಧರಿಸಿ ಅನ್ನೆಬೆಲ್ ಎಂಬ ಮಗಳಿಗೆ ಜನ್ಮ ನೀಡಿದಳು. ಆಗ ಜಾರ್ಜ್ ಕೆಲವು ದಿನ ಮುನಿಸಿಕೊಂಡಿತ್ತು! ಕ್ರಿಸ್ಟಿ ತನಗೆ ನೀಡುವ ಮಾತೃ ವಾತ್ಸಲ್ಯದಲ್ಲಿ ಅನ್ನೆಬೆಲ್ ಪಾಲು ಕೇಳುವಳೇನೋ ಎಂಬ ಆತಂಕ ಅದಕ್ಕಿತ್ತೇನೋ? ಆ ಮುನಿಸು ಬಹಳ ದಿನ ಉಳಿಯಲಿಲ್ಲ. ಅದು ಈಗ ಅನ್ನೆಬೆಲ್‌ಗೂ ಪ್ರೀತಿಯ ಗೆಳೆಯ. ಅವಳ ಆಟಿಗೆಗಳೆಂದರೆ ಜಾರ್ಜ್‌ಗೂ ತುಂಬ ಪ್ರೀತಿ.



ಜಾರ್ಜ್‌ಗೆ 5 ತಿಂಗಳು ತುಂಬಿದಾಗ ಪೂರ್ಣ ಬೆಳೆದ ಲ್ಯಾಬ್ರೆಡೋರ್ ನಾಯಿಯ ಗಾತ್ರದಷ್ಟಿತ್ತು. ಆಮೇಲೆ ಅದರ ಬೆಳವಣಿಗೆ ತೀರ ಆಶ್ಚರ್ಯವನ್ನು ಉಂಟು ಮಾಡುವಂತಿತ್ತು. ಪ್ರತಿ ದಿನ ಅದರ ತೂಕ ಒಂದು ಪೌಂಡಗಿಂತ ಹೆಚ್ಚುತ್ತಾ ಹೋಯಿತು. ಮೇಲಿಂದ ಮೇಲೆ ಅದರ ಹಾಸಿಗೆಯ ಗಾತ್ರವನ್ನು ಹೆಚ್ಚಿಸಬೇಕಾಯಿತು. ಅದರ ಗಾತ್ರ ಹೊರಗಿನ ಜನರ ಗಮನವನ್ನೂ ಸೆಳೆಯಲಾರಂಭಿಸಿತು. ತಿರುಗಾಟಕ್ಕೆ ಹೋದಾಗ ಎಲ್ಲರೂ ಅದರ ಕಡೆಗೆ ನೋಡಲಾರಂಭಿಸಿದರು. ಸಣ್ಣ ನಾಯಿಗಳಂತೂ ಇದರ ಆಕಾರ ನೋಡಿ ಭಯ ಪಟ್ಟುಕೊಳ್ಳುತ್ತಿದ್ದವು. ಇದು ಮಾತ್ರ ಯಾವ ನಾಯಿಯ ಮೇಲೂ ಆಕ್ರಮಣ ಮಾಡುತ್ತಿರಲಿಲ್ಲ. ‘ಅಷ್ಟೇ ಏಕೆ, ಸಣ್ಣ ನಾಯಿಗಳಿದ್ದಲ್ಲಿ ಅವುಗಳಿಗೆ ತಾಕದಂತೆ ಜೋಪಾನವಾಗಿ ಹೆಜ್ಜೆ ಇಡುತ್ತಿತ್ತು’ ಎಂದು ಹೇಳುತ್ತಾರೆ ಮಾಲೀಕ ಡೇವ್.

ಆದರೆ ಯೌವನಾವಸ್ಥೆಗೆ ಬಂದಾಗ ಜಾರ್ಜ್‌ಗೆ ಹೆಣ್ಣು ಸಂಗಾತಿ ಸಿಗಲಿಲ್ಲ. ಮನೆಯಲ್ಲಿರುವ ಪೀಠೋಪಕರಣಗಳ ಮೇಲೆ ಜಾರ್ಜ್ ದಾಳಿ ನಡೆಸತೊಡಗಿತು. ಬಳಿಕ ಅದನ್ನು ಪಶುವೈದ್ಯರ ಬಳಿಗೆ ಕರೆದೊಯ್ದು ಲಿಂಗಪಟುತ್ವವನ್ನೇ ಶೂನ್ಯಗೊಳಿಸಲಾಯಿತು. ಆ ಬಳಿಕ ಯೌವನದ ಚೇಷ್ಟೆಗಳಿಗೆ ತೆರೆ ಬಿದ್ದಿದೆ.

ಗಿನ್ನೆಸ್ ದಾಖಲೆಯಲ್ಲಿ ಹೆಸರು ದಾಖಲಾದ ಬಳಿಕ ಜಾರ್ಜ್ ಟೀವಿಗಳಲ್ಲೂ ಕಾಣಿಸಿಕೊಂಡಿತು. ಜಾರ್ಜ್ ಅಭಿಮಾನಿಗಳ ಕ್ಲಬ್‌ಗಳೂ ಹುಟ್ಟಿಕೊಂಡವು. ಫೇಸ್‌ಬುಕ್ ಜಾಲತಾಣವೊಂದರಲ್ಲೇ ಜಾರ್ಜ್‌ಗೆ 70 ಸಾವಿರ ಅಭಿಮಾನಿಗಳಿದ್ದಾರಂತೆ! ಅಂದ ಹಾಗೆ ಪ್ರತಿ ತಿಂಗಳೂ ಸುಮಾರು ಅರ್ಧ ಕ್ವಿಂಟಲ್ ಆಹಾರವನ್ನು ಜಾರ್ಜ್ ಕಬಳಿಸುತ್ತದೆ.

■ ಸುಭಾಸ ಯಾದವಾಡ

